(ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

ಅಸಲು ದಾವೆ ನಂ.124/2009

ದಿನಾಂಕಃ 29-10-2024, ಡಿ ಡ್ಲ್ಯೂ-2

| | |
|---|---|
| ಹೆಸರುಃ | ಮಂಜೇಗೌಡ |
| ತಂದೆಯ ಹೆಸರುಃ | ಕಾಳಪ್ಪ |
| ವಯಸ್ಸುಃ | 58 ವರ್ಷ |
| ವೃತ್ತಿಃ | ವ್ಯವಸಾಯ |
| ವಾಸಃ | ಸಬ್ಬತ್ತಿ ಗ್ರಾಮ |

**ಪ್ರತಿವಾದಿಯರ ಪರ ಸಾಕ್ಷಿದಾರರ ಮುಖ್ಯ ವಿಚಾರಣೆಃ ಶ್ರೀ ಆರ್ ಕೆ ಎಂ ವಕೀಲರಿಂದಃ**

ಈ ಪ್ರಕರಣದಲ್ಲಿ ನನ್ನ ಮುಖ್ಯ ವಿಚಾರಣೆಯ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಹೇಳಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ ಮತ್ತು ಅದರ ಪ್ರತಿ ಪುಟದಲ್ಲಿರುವ ಸಹಿಯೂ ನನ್ನದೇ ಆಗಿರುತ್ತದೆ.

1ನೇ ಪ್ರತಿವಾದಿ ವಾದಿ ಮತ್ತು 2 ಮತ್ತು 3 ಪ್ರತಿವಾದಿಯರಿಗೆ ಮರಣ ಶಾಸನ ಪತ್ರವನ್ನು ಬರೆದುಕೊಟ್ಟಿರುತ್ತಾರೆ. ಅದಕ್ಕೆ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿಯು ಮರಣ ಶಾಸನ ಪತ್ರ ಹಾಗೂ ಮರಣ ಶಾಸನ ಪತ್ರದಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಮರಣ ಶಾಸನ ಪತ್ರವನ್ನು ನಿಡಿ -10 ಎಂದು, ಸಾಕ್ಷಿಯ ಸಹಿಯನ್ನು ನಿಡಿ-10ಎ ಗುರುತಿಸಲಾಯಿತು. ನನ್ನ ಜೊತೆ ಶಿಡ್ಲೇಗೌಡ ಮತ್ತು ಅವರ ಹೆಂಡತಿ ಮತ್ತು ಬಿ ಟಿ ಕೃಷ್ಣ ಎಂಬುವವರು ಸಹಿ ಮಾಡಿರುತ್ತಾರೆ. ಮರಣ ಶಾಸನ ಪತ್ರಕ್ಕೆ

1ನೇ ಪ್ರತಿವಾದಿಯು ಸಹಿ ಮಾಡಿದ್ದು ಅವರ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. 1ನೇ ಪ್ರತಿವಾದಿಯ ಸಹಿಯನ್ನು ನಿಡಿ–10ಬಿ ಯಿಂದ ನಿಡಿ–10ಎಫ್ ಎಂದು ಗುರುತಿಸಲಾಯಿತು.

ವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲವಕಾಶವನ್ನು ಕೋರಿದ್ದು ಕಾಲವಕಾಶ ನೀಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ.ಕೇ.ಸ. ಇದೆ.

(**ರಘು ಎಂ.**)

**2ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ**

**ಅರಕಲಗೂಡು.**

®